

بِسۡمِ اللّٰہِ الرَّحۡمٰنِ الرَّحِیۡمِ

# ರಮಝಾನುಲ್ ಮುಬಾರಕ್ – ಕೆಲವು ಸಂಶಯ ನಿವಾರಣೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **03–06–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇನ್‌ಶಾಅಲ್ಲಾಹ್, ಮೂರು ನಾಲ್ಕು ದಿನಗಳಲ್ಲಿ ಪವಿತ್ರ ರಮಝಾನ್ ತಿಂಗಳು ಪ್ರಾರಂಭವಾಗಲಿದೆ. ಉಪವಾಸ ಅನುಷ್ಠಿಸುವುದು ಇಸ್ಲಾಮಿನ ಮೂಲ ಸ್ತಂಭಗಳಲ್ಲಿ ಒಂದಾಗಿದೆ. ಅವುಗಳನ್ನು ಪೂರ್ಣವಾಗಿ ಅನುಷ್ಠಿಸುವುದು ಆವಶ್ಯಕವಾಗಿದೆ. ಉಪವಾಸದ ಬಗ್ಗೆ ಕೆಲವು ಚಿಕ್ಕ ಚಿಕ್ಕ ಪ್ರಶ್ನೆಗಳು ಕೇಳಲಾಗುತ್ತಿವೆ. ಸಹ್ರಿಯ ಸಮಯದ ಬಗ್ಗೆ, ಇಫ್ತಾರ್ ಸಮಯದ ಬಗ್ಗೆ, ರೋಗಿಯ ಬಗ್ಗೆ, ಪ್ರಯಾಣಿಕನ ಬಗ್ಗೆ, ಈ ರೀತಿಯ ವಿವಿಧ ಪ್ರಶ್ನೆಗಳನ್ನು ಕೇಳುತ್ತಾರೆ. ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು **ಹಕಮ್** ಮತ್ತು **ಅದ್ಲ್** ಆಗಿ ಕಳುಹಿಸಿದ್ದಾನೆ. ಇಸ್ಲಾಮ್ ಧರ್ಮದ ಉಪದೇಶಗಳನ್ನು ಅಸ್ತಿಭಾರವಾಗಿರಿಸಿ ಅವರು ಪ್ರತಿಯೊಂದು ವಿಷಯದ ಬಗ್ಗೆ ತೀರ್ಮಾನ ಮಾಡಬೇಕಾಗಿತ್ತು. ಅವರು ತೀರ್ಮಾನಿಸಿರುವರು. ಪ್ರತಿಯೊಂದು ಸಮಸ್ಯೆಯನ್ನು ಅವರು ಪರಿಹರಿಸಬೇಕಾಗಿತ್ತು. ಅವರು ಸಮಸ್ಯೆಗಳನ್ನು ಪರಿಹರಿಸಿದರು. ಆದುದರಿಂದ ಈ ಕಾಲದಲ್ಲಿ ನಮ್ಮ ಮುಂದಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ನಮ್ಮ ಜ್ಞಾನವನ್ನು ವರ್ಧಿಸಲಿಕ್ಕಾಗಿ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಡೆಗೆ ನೋಡುವ ಆವಶ್ಯಕತೆ ಇದೆ. ಈ ದಿನ ನಾನು ಉಪವಾಸಗಳಿಗೆ ಸಂಬಂಧಿಸಿ ಕೇಳಲಾಗುವ ಕೆಲವು ಪ್ರಶ್ನೆಗಳಿಗೆ, ಅಥವಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವುಗಳ ಬಗ್ಗೆ ಯಾವ ನಿಲುವು ಹೊಂದಿದ್ದರೆಂದು ನಾನು ವಿವರಿಸುವೆನು.

ಯಾವಾಗಲೂ ನೆನಪಿಡಬೇಕಾದ ಪ್ರಮುಖ ವಿಷಯವೇನೆಂದರೆ ಇಸ್ಲಾಮ್ ಧರ್ಮದಲ್ಲಿ ಕರ್ಮದ ಬುನಾದಿ ತಖ್ವದ ಮೇಲಿದೆ. ಆದುದರಿಂದ ಉಪವಾಸಗಳ ಬಗ್ಗೆ ತಖ್ವವನ್ನು ಮುಂದೆ ಇರಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿರುವ ಉಪದೇಶಗಳನ್ನು ಪರಿಗಣಿಸಿಕೊಂಡು ನೀವು ನಿಮ್ಮ ಉಪವಾಸಗಳನ್ನು ಅಲ್ಲಾಹನಿಗೋಸ್ಕರ ಸತ್ಯಸಂಧವಾಗಿ ಅನುಷ್ಠಿಸಬೇಕಾಗಿದೆ. ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ಪ್ರಶ್ನೆ ಕೇಳಲಾಯಿತು. ಇಲ್ಲಿ ಉಪವಾಸವನ್ನು ಬುಧವಾರ ಪ್ರಾರಂಭಿಸಬೇಕಾಗಿತ್ತು. ಆದರೆ ನಮ್ಮಲ್ಲಿ ಪ್ರಥಮ ಉಪವಾಸ ಗುರುವಾರ ಅನುಷ್ಠಿಸಲಾಯಿತು. ಈಗ ನಾವೇನು ಮಾಡಬೇಕು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ರಮಝಾನ್ ತಿಂಗಳು ಕಳೆದ ನಂತರ ಒಂದು ಉಪವಾಸ ಅನುಷ್ಠಿಸಿರಿ. ಹಾಗೆ ಬಿಟ್ಟು ಹೋದ ಉಪವಾಸ ರಮಝಾನ್ ಮಾಸದ ನಂತರ ಪೂರ್ಣಗೊಳಿಸಿರಿ.

ಇದೇ ರೀತಿ ಸೆಹ್‌ರಿಯ ವಿಷಯವಿದೆ. ಸೆಹ್‌ರಿ ಉಂಡು ಉಪವಾಸ ಅನುಷ್ಠಿಸುವುದು ಆವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇದೇ ಆಜ್ಞೆ ನೀಡಿದ್ದಾರೆ. ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಉಪವಾಸದ ದಿನಗಳಲ್ಲಿ ಸೆಹ್‌ರಿ ಉಣ್ಣಿರಿ. ಏಕೆಂದರೆ ಸೆಹ್‌ರಿ ತಿಂದು ಉಪವಾಸ ಅನುಷ್ಠಿಸುವುದರಲ್ಲಿ ಅನುಗ್ರಹವಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದಕ್ಕೆ ಬದ್ಧರಾಗಿದ್ದರು. ಅವರು ಸ್ವತಃ ಸೆಹ್‌ರಿ ಉಣ್ಣುತ್ತಿದ್ದರಲ್ಲದೆ ಜಮಾಅತಿನ ಜನರೊಂದಿಗೆ ಸಹ ಹೇಳುತ್ತಿದ್ದರು. ಸೆಹ್‌ರಿ ಆವಶ್ಯಕವಾಗಿದೆ ಎಂದು. ಇದೇ ರೀತಿ ಖಾದಿಯಾನಿಗೆ ಆಗಮಿಸುತ್ತಿದ್ದ ಅತಿಥಿಗಳಿಗೆ ಸೆಹ್‌ರಿಯ ವ್ಯವಸ್ಥೆ ಕ್ರಮಬದ್ಧವಾಗಿ ಮಾಡಲಾಗುತ್ತಿತ್ತು. ದೊಡ್ಡ ಪ್ರಮಾಣದಲ್ಲಿ ಅದರ ವ್ಯವಸ್ಥೆ ಮಾಡಲಾಗುತ್ತಿತ್ತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಅಲ್ಲಾಹನು ಹೇಳುತ್ತಾನೆ– **ಯುರೀದುಲ್ಲಾಹು ಬಿಕುಮುಲ್ ಯುಸ್‌ರ ವಲಾ ಯುರೀದು ಬಿಕುಮುಲ್ ಉಸ್‌ರ.** ಅಲ್ಲಾಹನು ನಿಮಗೆ ಸುಲಭವನ್ನು ಇಚ್ಛಿಸುತ್ತಾನೆ, ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ. (ಪವಿತ್ರ ಖುರ್‌ಆನ್ 2:186)

ಅಲ್ಲಾಹನ ಉದ್ದೇಶವು, ನೀವು ಸತ್ಯವಿಶ್ವಾಸವನ್ನು ಸ್ವೀಕರಿಸಿದ ನಂತರ ನೀವು ಕಷ್ಟದಿಂದ ಜೀವಿಸಬೇಕೆಂದು ನಾವು ಇಚ್ಛಿಸುವುದಿಲ್ಲ. ಆದುದರಿಂದ ನಾವು ನಿಮಗೆ ವ್ರತಾನುಷ್ಠಾನವನ್ನು ಕಡ್ಡಾಯಗೊಳಿಸಿದ್ದೇವೆ. ಇದು ಸೂಚಿಸುವುದೇನೆಂದರೆ ನಿಮ್ಮ ಕಷ್ಟಗಳು ದೂರ ಸರಿಯಲು ನಾವು ಉಪವಾಸವನ್ನು ಕಡ್ಡಾಯಗೊಳಿಸಿದ್ದೇವೆ ಎಂದು. ಇದರಲ್ಲಿ ಸೂಕ್ಷ್ಮಾರ್ಥ ಅಡಕವಾಗಿದೆ. ಇದು ಸತ್ಯವಿಶ್ವಾಸಿಯನ್ನು ಸತ್ಯವಿಶ್ವಾಸಿಯನ್ನಾಗಿ ಮಾಡುತ್ತದೆ. ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ ಕಷ್ಟವನ್ನು ಇಚ್ಛಿಸುವುದಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಉಪವಾಸ ಕಾಲದಲ್ಲಿ ಹಸಿದಿರುವುದು ಅಥವಾ ಧರ್ಮಕ್ಕೋಸ್ಕರ ಬಲಿದಾನ ನೀಡುವುದು ಮನುಷ್ಯನಿಗೆ ಯಾವುದೇ ಹಾನಿಯನ್ನು ಉಂಟು ಮಾಡಲಾರದು. ಅವು ಪೂರ್ಣವಾಗಿ ಲಾಭಕರವಾಗುವುವು.

ರಮಝಾನ್‌ನಲ್ಲಿ ಮನುಷ್ಯರು ಹಸಿವೆಯಿಂದ ಇರುತ್ತಾರೆ ಎಂದು ಯೋಚಿಸುವವರು ಪವಿತ್ರ ಖುರ್‌ಆನ್ ಹೇಳಿರುವುದನ್ನು ಅಲ್ಲಗಳೆಯುತ್ತಾರೆ. ಏಕೆಂದರೆ ಅಲ್ಲಾಹನು ಹೇಳುವುದು, ನೀವು ಹಸಿವೆಯಿಂದ ಇದ್ದಾಗ ನಾವು ನಿಮಗೆ ರಮಝಾನಿನ ಉಪವಾಸ ಕಡ್ಡಾಯಗೊಳಿಸಿದೆವು. ನೀವು ರೊಟ್ಟಿಯನ್ನು ತಿನ್ನುವಂತಾಗಲಿ ಎಂದು. ಇದರಿಂದ ತಿಳಿಯುವುದೇನೆಂದರೆ ಅಲ್ಲಾಹನು ತಿನ್ನಿಸುವ ರೊಟ್ಟಿಯೇ ನಿಜವಾದ ರೊಟ್ಟಿಯಾಗಿದೆ. ವಾಸ್ತವಿಕ ಜೀವಿತ ಅದರಿಂದಲೇ ದೊರಕುತ್ತದೆ. ಅದರ ಹೊರತು ಬೇರೆ ರೊಟ್ಟಿಗಳು ರೊಟ್ಟಿಗಳಲ್ಲ, ಕಲ್ಲುಗಳಾಗಿವೆ. ಅವು ತಿನ್ನುವವರ ನಾಶಕ್ಕೆ ಕಾರಣವಾಗುವುವು. ಆದುದರಿಂದ ಸತ್ಯವಿಶ್ವಾಸಿಗೆ ಕಡ್ಡಾಯವಾಗಿರುವುದೇನೆಂದರೆ ಅವನ ಬಾಯಿಯೊಳಗೆ ಹೋಗುವ ತುತ್ತಿನ ಬಗ್ಗೆ ಅವನು ನೋಡಬೇಕು. ಅದು ಯಾರಿಗೋಸ್ಕರ ಎಂದು. ಅದು ಅಲ್ಲಾಹನಿಗೋಸ್ಕರವಾಗಿದ್ದರೆ ಅದು ನಿಜವಾದ ರೊಟ್ಟಿಯಾಗಿದೆ. ಆದರೆ ಅದು ತನ್ನ ಸ್ವಂತಕ್ಕಾಗಿದ್ದರೆ ಅದು ರೊಟ್ಟಿಯಲ್ಲ.

ಸೆಹ್‌ರಿ ಅಲ್ಲಾಹನ ಆಜ್ಞೆ ಪ್ರಕಾರ ತಿನ್ನುವುದಾದರೆ ಅದು ಉತ್ತಮ ಆಹಾರವಾಗಿದ್ದರೂ ಅದು ಅಲ್ಲಾಹನಿಗೋಸ್ಕರ ತಿನ್ನುವುದಾಗಿದೆ. ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಹಾಗೆ ಅದರಲ್ಲಿ ಅನುಗ್ರಹವಿರುತ್ತದೆ. ನಿಮ್ಮ ಉದ್ದೇಶ ಹೊಟ್ಟೆ ತುಂಬಿಸುವುದಾದರೆ ಮತ್ತು ಒಳ್ಳೆಯ ಆಹಾರ ತಿನ್ನುವುದಾಗಿದ್ದರೆ ಮತ್ತು ರುಚಿ ಅನುಭವಿಸುವುದಾದರೆ, ಅದು ನೀವು ನಿಮ್ಮ ಆತ್ಮ ತೃಪ್ತಿಗೆ ಮಾಡುವ ಕೆಲಸವಾಗುತ್ತದೆ.

ಪ್ರಯಾಣ ಕಾಲದಲ್ಲಿ ಮತ್ತು ರೋಗಾವಸ್ಥೆಯಲ್ಲಿ ಉಪವಾಸ ಅನುಷ್ಠಿಸುವುದು ಧರ್ಮ ಬದ್ಧವಲ್ಲ. ಮಿರ್ಝಾ ಯಅ್‌ಕೂಬ್ ಬೇಗ್ ಒಮ್ಮೆ ಪ್ರಯಾಣ ಮಾಡುತ್ತಾ ಬೇರೆ ಪ್ರದೇಶದಿಂದ ಖಾದಿಯಾನಿಗೆ ಬಂದರು. ಆಗ ಅಸರ್ ಸಮಯವಾಗಿತ್ತು. ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಹೇಳಿದರು: ಉಪವಾಸವನ್ನು ತೊರೆಯಿರಿ, ಪ್ರಯಾಣ ಕಾಲದಲ್ಲಿ ಉಪವಾಸ ಅನುಷ್ಠಿಸುವುದು ಧರ್ಮ ಬದ್ಧವಲ್ಲ ಎಂದು. ಒಮ್ಮೆ ರೋಗಿಗಳ ಬಗ್ಗೆ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಕೇಳಿದಾಗ ಅವರು ಹೇಳಿದರು: ವಿನಾಯತಿಗಳ ಪ್ರಯೋಜನ ಪಡೆಯಬೇಕು. ಧರ್ಮದಲ್ಲಿ ಕಠಿಣತೆ ಇಲ್ಲ. ಅದು ಸೌಲಭ್ಯ ನೀಡುವುದನ್ನು ಕಲಿಸುತ್ತದೆ. ರೋಗಿ ಮತ್ತು ಪ್ರಯಾಣಿಕನಿಗೆ ಉಪವಾಸ ಅನುಷ್ಠಿಸಲು ಸಾಧ್ಯವಿದ್ದರೆ ಅನುಷ್ಠಿಸಲಿ ಎಂದು ಹೇಳುವುದನ್ನು ನಾವು ಸರಿ ಎಂದು ಭಾವಿಸುವುದಿಲ್ಲ.

ತಾತ್ಕಾಲಿಕ ವಾಸ್ತವ್ಯದ ಸಂದರ್ಭದಲ್ಲಿ ಉಪವಾಸ ಅನುಷ್ಠಿಸುವ ಬಗ್ಗೆ ಹಝ್ರ್‌ರತ್ ಸಯ್ಯದ್ ಮುಹಮ್ಮದ್ ಸರ್‌ವರ್‌ಶಾ ಸಾಹೇಬ್ ಬರೆಯುತ್ತಾರೆ: ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದರು: ಒಬ್ಬನು ಒಂದು ಸ್ಥಳದಲ್ಲಿ ಮೂರು ದಿನಕ್ಕಿಂತ ಹೆಚ್ಚು ಕಾಲ ವಾಸಿಸುವುದಾದರೆ ಅವನು ಉಪವಾಸ ಅನುಷ್ಠಿಸಬೇಕು. ಮೂರು ದಿನಕ್ಕಿಂತ ಕಡಿಮೆ ಅನ್ಯ ಸ್ಥಳದಲ್ಲಿ ತಂಗುವುದಿದ್ದರೆ ಆಗ ಉಪವಾಸ ಅನುಷ್ಠಿಸಬೇಕಾಗಿಲ್ಲ. ಆದರೆ ಖಾದಿಯಾನ್‌ನಲ್ಲಿ ಮೂರು ದಿನಕ್ಕಿಂತ ಕಡಿಮೆ ಕಾಲ ವಾಸಿಸಿದಾಗ ಉಪವಾಸ ಅನುಷ್ಠಿಸಿದರೆ ಪುನಃ ಆ ಉಪವಾಸ ಅನುಷ್ಠಿಸಬೇಕಾಗಿಲ್ಲ. ಏಕೆಂದರೆ ಖಾದಿಯಾನ್ ಅಹ್ಮದಿಯರಿಗೆ ದ್ವಿತೀಯ ಸ್ವದೇಶವಾಗಿದೆ. ಆದುದರಿಂದ ಖಾದಿಯಾನ್‌ನಲ್ಲಿ ಮೂರು ದಿನಗಳಿಗಿಂತ ಕಡಿಮೆ ಅವಧಿಯ ವಾಸ್ತವ್ಯದ ಕಾಲದಲ್ಲಿ ಸಹ ಉಪವಾಸ ಅನುಷ್ಠಿಸಲು ಬಯಸುವುದಾದರೆ ಅನುಷ್ಠಿಸಬಹುದು. ಆದರೆ ಬೇರೆ ಸ್ಥಳಗಳಲ್ಲಿ ಮೂರು ದಿನಗಳ ಕಾಲ ವಾಸಿಸುವುದಾದರೆ ಮಾತ್ರ ಉಪವಾಸ ಅನುಷ್ಠಿಸಬಹುದಾಗಿದೆ.

ರೋಗಿಗಳ ಮತ್ತು ಪ್ರಯಾಣಿಕರ ಉಪವಾಸ ಅನುಷ್ಠಿಸುವ ಬಗ್ಗೆ, ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸನ್ನಿಧಿಯಲ್ಲಿ ಚರ್ಚೆ ನಡೆಯಿತು. ಹಝ್ರ್‌ರತ್ ಮೌಲವಿ ನೂರುದ್ದೀನ್ ಸಾಹೇಬರು ಹೇಳಿದರು: ಶೇಖ್ ಇಬ್ನು ಅರಬಿ ಹೇಳುತ್ತಾರೆ: ರೋಗಿ ಮತ್ತು ಪ್ರಯಾಣಿಕ ರಮಝಾನ್ ತಿಂಗಳಲ್ಲಿ ಉಪವಾಸ ಅನುಷ್ಠಿಸಿದರೆ ಸಹ, ರಮಝಾನ್ ತಿಂಗಳು ದಾಟಿ ಹೋದ ನಂತರ ಆ ಉಪವಾಸಗಳನ್ನು ಪುನಃ ಪೂರ್ಣಗೊಳಿಸುವುದು ಕಡ್ಡಾಯವಾಗಿದೆ. ಏಕೆಂದರೆ ಅಲ್ಲಾಹನು ಹೇಳಿದ್ದಾನೆ: **ಫಮನ್ ಕಾನ ಮಿನ್‌ಕುಮ್ ಮರೀಝುನ್ ಅವ್ ಅಲಾ ಸಫರಿನ್ ಫ ಇದ್ದತುನ್ ಮಿನ್ ಅಯ್ಯಾಮಿನ್ ಉಖರ.** ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ಣಗೊಳಿಸಲಿ. (ಪವಿತ್ರ ಖುರ್‌ಆನ್ 2:186). ಇದು ಅಲ್ಲಾಹನ ಸ್ಪಷ್ಟ ಆಜ್ಞೆಯಾಗಿದೆ. ಆದುದರಿಂದ ರಮಝಾನ್‌ನಲ್ಲಿ ಅವರು ಉಪವಾಸ ಅನುಷ್ಠಿಸುವುದಾದರೂ ಅದು ಅವರ ಸ್ವಂತ ಇಷ್ಟ ಪ್ರಕಾರವಾಗಿದೆ. ಅದರಿಂದ 'ಅನಂತರ ಉಪವಾಸ ಅನುಷ್ಠಿಸಬೇಕು' ಎಂಬ ಅಲ್ಲಾಹನ ಆಜ್ಞೆ ಬದಲಾಗಲಾರದು. ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ರೋಗಿಯಾಗಿರುವಾಗ ಮತ್ತು ಪ್ರಯಾಣದಲ್ಲಿರುವಾಗ ಉಪವಾಸ ಅನುಷ್ಠಿಸುವವನು ಅಲ್ಲಾಹನ ಆಜ್ಞೆಗೆ ವಿರುದ್ಧವಾಗಿ ನಡೆಯುತ್ತಾನೆ. ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ: ರೋಗಿ ಮತ್ತು ಪ್ರಯಾಣಿಕ ಉಪವಾಸ ಅನುಷ್ಠಿಸಬಾರದೆಂದು. ರೋಗಿ ರೋಗ ಮುಕ್ತನಾದ ನಂತರ ಮತ್ತು ಪ್ರಯಾಣಿಕ ಪ್ರಯಾಣ ಮುಗಿಸಿದ ನಂತರ ಉಪವಾಸ ಅನುಷ್ಠಿಸಬೇಕು. ಅಲ್ಲಾಹನ ಆಜ್ಞೆ ಪ್ರಕಾರ ವರ್ತಿಸಬೇಕು. ಏಕೆಂದರೆ ಮೋಕ್ಷ ಅಲ್ಲಾಹನ ಅನುಗ್ರಹದಿಂದ ಲಭಿಸುತ್ತದೆ. ಅನುಷ್ಠಾನ ಕರ್ಮಗಳನ್ನು ಬಲವಂತವಾಗಿ ಮಾಡಿ ಯಾರಿಗೂ ಮೋಕ್ಷಗಳಿಸಲು ಸಾಧ್ಯವಾಗದು. ಅಲ್ಲಾಹನು ರೋಗದ ಬಗ್ಗೆ ಅದು ಸಣ್ಣದಾಗಿರಲಿ ಅಥವಾ ದೊಡ್ಡದಾಗಿರಲಿ ಎಂದು ಹೇಳಿಲ್ಲ. ಅದೇ ರೀತಿ ಪ್ರಯಾಣದ ಬಗ್ಗೆ ಕಡಿಮೆ ದೂರ ಮತ್ತು ಹೆಚ್ಚು ದೂರದ ಬಗ್ಗೆ ಸಹ ಹೇಳಿಲ್ಲ. ಆದುದರಿಂದ ಸಾರ್ವತ್ರಿಕವಾಗಿ ಅನ್ವಯವಾಗುವ ಆಜ್ಞೆ ನೀಡಲಾಗಿದೆ. ಅದನ್ನು ಅನುಸರಿಸಬೇಕಾಗಿದೆ. ರೋಗಿ ಅಥವಾ ಪ್ರಯಾಣಿಕ ಉಪವಾಸ ಅನುಷ್ಠಿಸಿದರೆ ಅವನು ಅಲ್ಲಾಹನ ಆಜ್ಞೆಯನ್ನು ಕಡೆಗಣಿಸಿದ ತೀರ್ಪಿಗೆ ಪಾತ್ರನಾಗುತ್ತಾನೆ.

ಹಝ್ರ್‌ರತ್ ಸಾಹಿಬ್ ಝಾದ ಬಶೀರ್ ಅಹ್ಮದ್ ಸಾಹೇಬ್ ಬರೆಯುತ್ತಾರೆ: ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹೇಬ್ ಹೀಗೆ ಹೇಳಿದರು: ಒಮ್ಮೆ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಲುಧಿಯಾನದಲ್ಲಿ ರಮಝಾನ್ ತಿಂಗಳ ಉಪವಾಸ ಅನುಷ್ಠಿಸಿದ್ದರು. ಅವರಿಗೆ ಆಗ ಹೃದಯ ಬಡಿತ ತಗ್ಗುವ ಸ್ಥಿತಿ ಉಂಟಾಗಿ ಕೈ ಕಾಲುಗಳು ತಣ್ಣಗಾದುವು. ಸೂರ್ಯಾಸ್ತಮನವಾಗಲು ಬಹಳ ಕಡಿಮೆ ಸಮಯ ಬಾಕಿಯಾಗಿತ್ತು. ಆಗ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಕ್ಷಣ ಉಪವಾಸ ಮುರಿದರು. ಅವರು ಯಾವಾಗಲೂ ಶರೀಅತ್ ಪ್ರಕಾರ ಸುಲಭವಾದ ಮಾರ್ಗ ಅವಲಂಬಿಸುತ್ತಿದ್ದರು. ಹಝ್ರ್‌ರತ್ ಬಶೀರ್ ಅಹ್ಮದ್ ಸಾಹೇಬರು ಹೇಳುತ್ತಾರೆ: ಹದೀಸುಗಳಲ್ಲಿ ವರದಿಯಾಗಿದೆ. ಹಝ್ರ್‌ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದರು: ಹಝ್ರ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎರಡು ಧರ್ಮ ಬದ್ಧ ಮಾರ್ಗಗಳಲ್ಲಿ ಸುಲಭವಾದ ಮಾರ್ಗವನ್ನು ಇಷ್ಟಪಡುತ್ತಿದ್ದರು.

ಕೆಲವು ಸಾರಿ ರಮಝಾನ್ ತಿಂಗಳು ಎಂತಹ ಕಾಲದಲ್ಲಿ ಬರುತ್ತದೆ ಎಂದರೆ ಕೃಷಿಕರು ಬಹಳ ಹೆಚ್ಚು ಕೆಲಸ ಮಾಡಲಿಕ್ಕಿರುತ್ತದೆ. ಬೀಜ ಬಿತ್ತುವ ಕಾಲ ಅಥವಾ ಬೆಳೆ ಕೊಯ್ಯುವ ಕಾಲದಲ್ಲಿ ಕೂಲಿ ಕೆಲಸ ಮಾಡುವವರಿಗೆ ಉಪವಾಸ ಅನುಷ್ಠಿಸುವುದು ಕಷ್ಟವಾಗುತ್ತದೆ. ಇಂತಹ ಕಾರ್ಮಿಕರ ಬಗ್ಗೆ ವಿಧಿ ಏನು ಎಂದು ಕೇಳಿದಾಗ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: **ಅಲ್ ಅಅ್‌ಮಾಲು ಬಿನ್ನಿಯ್ಯಾತಿ.** ಎಲ್ಲಾ ಕೆಲಸಗಳು ಸಂಕಲ್ಪ ಪ್ರಕಾರ ನಿರ್ಧರಿಸಲ್ಪಡುತ್ತವೆ. ಇಂತಹ ಜನರು ತಮ್ಮ ಸ್ಥಿತಿಯನ್ನು ರಹಸ್ಯವಾಗಿಡುತ್ತಾರೆ. ಪ್ರತಿಯೊಬ್ಬ ತಖ್ವ ಮತ್ತು ತ್ವಹಾರತ್ (ಪರಿಶುದ್ಧಿ)ಯೊಂದಿಗೆ ತನ್ನ ಸ್ಥಿತಿಯ ಬಗ್ಗೆ ಯೋಚಿಸಲಿ. ಅವನಿಗೆ ಆ ವೇಳೆಗಳಲ್ಲಿ ಬೇರೆ ಕೂಲಿ ಕಾರ್ಮಿಕರನ್ನು ಏರ್ಪಡಿಸಲು ಸಾಧ್ಯವಿದ್ದರೆ

ಹಾಗೆ ಮಾಡಲಿ. ಸಾಧ್ಯವಿಲ್ಲವಾದರೆ ರೋಗಿಯ ಹಾಗೆ ಬೇರೆ ಸಮಯದಲ್ಲಿ ಉಪವಾಸ ಅನುಷ್ಠಿಸಲಿ.

ಫಿದ್‌ಯದ ಬಗ್ಗೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಫಿದ್‌ಯ ನಿಶ್ಚಯಿಸಲ್ಪಟ್ಟದ್ದು ಏಕೆಂದು ನಾನು ಯೋಚಿಸಿದೆ. ಇದು ಉಪವಾಸ ಅನುಷ್ಠಿಸುವ ಭಾಗ್ಯ ಲಭಿಸಲಿಕ್ಕಾಗಿದೆ ಎಂದು ತಿಳಿಯಿತು. ಉಪವಾಸ ಅನುಷ್ಠಿಸುವ ಭಾಗ್ಯ ನೀಡುವವನು ಅಲ್ಲಾಹನಾಗಿದ್ದಾನೆ. ಪ್ರತಿಯೊಂದು ವಸ್ತುವನ್ನು ಅಲ್ಲಾಹನಿಂದಲೇ ಬೇಡಿಕೊಳ್ಳಬೇಕು. ಅಲ್ಲಾಹನು ಸರ್ವಶಕ್ತನಾಗಿದ್ದಾನೆ. ಅವನು ಇಚ್ಛಿಸುವುದಾದರೆ ಓರ್ವ ಬಲಹೀನನಿಗೂ ಉಪವಾಸ ಅನುಷ್ಠಿಸುವ ಶಕ್ತಿ ನೀಡಬಲ್ಲವನಾಗಿದ್ದಾನೆ. ನನ್ನ ಅಭಿಪ್ರಾಯದಲ್ಲಿ ಈ ರೀತಿ ಪ್ರಾರ್ಥಿಸಬೇಕು: ಓ ನನ್ನ ದೇವ, ಇದು ನಿನ್ನ ಅನುಗ್ರಹಭರಿತ ತಿಂಗಳಾಗಿದೆ. ನಾನು ಈ ತಿಂಗಳ ಅನುಗ್ರಹದಿಂದ ವಂಚಿತನಾಗುತ್ತಾ ಇದ್ದೇನೆ. ನಾನು ಮುಂದಿನ ರಮಝಾನಿನಲ್ಲಿ ಜೀವಂತವಾಗಿರುವೆನೋ ಇಲ್ಲವೋ ಎಂದು ತಿಳಿಯದು. ನಾನು ಬಿಟ್ಟ ಉಪವಾಸಗಳನ್ನು ಅನುಷ್ಠಿಸುವ ಭಾಗ್ಯ ದೊರಕುವುದೋ ಇಲ್ಲವೋ ಎಂದು ಸಹ ತಿಳಿಯದು ಎಂದು ಪ್ರಾರ್ಥಿಸಿ ಉಪವಾಸ ಅನುಷ್ಠಿಸುವ ಭಾಗ್ಯ ನೀಡುವಂತೆ ಪ್ರಾರ್ಥಿಸಬೇಕು. ಹೀಗೆ ಪ್ರಾರ್ಥಿಸುವ ಹೃದಯ ಹೊಂದಿದವರಿಗೆ ಅಲ್ಲಾಹನು ಉಪವಾಸ ಅನುಷ್ಠಿಸುವ ಶಕ್ತಿ ನೀಡುವನು ಎಂದು ನಾನು ದೃಢವಾಗಿ ನಂಬುತ್ತೇನೆ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ವಿಚಾರಿಸಲಾಯಿತು. ಒಬ್ಬನಿಗೆ ಉಪವಾಸ ಅನುಷ್ಠಿಸಲು ಸಾಧ್ಯವಾಗುವುದಿಲ್ಲವಾದರೆ ಅದಕ್ಕೆ ಬದಲಾಗಿ ನಿರ್ಗತಿಕರಿಗೆ ಊಟ ನೀಡಬೇಕಾಗಿದೆ. ಅದರ ಹಣವನ್ನು ಖಾದಿಯಾನಿನ ಯತೀಮ್ ಫಂಡ್‌ಗೆ ಅಥವಾ ಜಮಾಅತಿನ ನಿಝಾಮ್‌ಗೆ ನೀಡುವುದು ಅನುವದನೀಯವೇ? ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ನಿಮ್ಮ ಪಟ್ಟಣದ ನಿರ್ಗತಿಕರಿಗೆ ಊಟ ನೀಡಬಹುದು ಅಥವಾ ಯತೀಮ್, ಮಿಸ್‌ಕೀನ್ ಫಂಡ್‌ಗೆ ಕಳುಹಿಸಬಹುದು. ಅಥವಾ ಉಪವಾಸ ಇಫ್ತಾರ್ ಮಾಡಿಸಲು ಸಹ ಬಳಸಬಹುದು.

ಉಪವಾಸದಲ್ಲಿರುವಾಗ ಮರೆತು ಏನಾದರೂ ತಿಂದರೆ ಅಥವಾ ಕುಡಿದರೆ ಉಪವಾಸ ಭಂಗವಾಗಲಾರದು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ಕೇಳಲಾಯಿತು: ರಮಝಾನ್ ತಿಂಗಳಲ್ಲಿ ಮನೆಯೊಳಗೆ ಕುಳಿತು ಸಹ್ರಿ ಉಂಡ ನಂತರ ಮನೆಯಿಂದ ಹೊರಗೆ ಬಂದು ನೋಡಿದಾಗ ಬೆಳಕಾಗಿದೆ ಎಂದು ತಿಳಿಯಿತು. ಆ ದಿನದ ಉಪವಾಸ ನಾನು ಪುನಃ ಅನುಷ್ಠಿಸಬೇಕೇ? ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಕಾಲ ದಾಟಿ ಹೋಗಿದೆ ಎಂದು ತಿಳಿಯದೆ ಸಹ್ರಿ ಉಂಡರೆ ಆ ಉಪವಾಸ ಪುನಃ ಅನುಷ್ಠಿಸಬೇಕಾಗಿಲ್ಲ. ಮರೆತು ತಿಂದರೆ ಉಪವಾಸ ಭಂಗವಾಗದು.

ಉಪವಾಸ ಅನುಷ್ಠಿಸಬೇಕಾದ ಪ್ರಾಯದ ಬಗ್ಗೆ ಅನೇಕ ಮಕ್ಕಳು ಮತ್ತು ದೊಡ್ಡವರು ಕೇಳುತ್ತಾರೆ. ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಚಿಕ್ಕ ಪ್ರಾಯದ ಮಕ್ಕಳು ಉಪವಾಸ ಅನುಷ್ಠಿಸಬಾರದೆಂದು ಶರೀಅತ್ ಹೇಳಿದೆ. ಆದರೆ ಅವರು ಪ್ರಾಪ್ತ ವಯಸ್ಕರಾಗುವುದಕ್ಕೆ ಸಮೀಪವಾಗುವಾಗ ಅವರಿಗೆ ಉಪವಾಸ ಅನುಷ್ಠಿಸುವ ಅಭ್ಯಾಸ ಮಾಡಿಸಬೇಕು. ನನಗೆ ನೆನಪಿರುವ ಹಾಗೆ ನನ್ನ ಪ್ರಾಯ ಹನ್ನೆರಡು ಅಥವಾ ಹದಿಮೂರು ಆಗಿರುವಾಗ ಪ್ರಥಮ ಉಪವಾಸ ಅನುಷ್ಠಿಸುವ ಅನುಮತಿಯನ್ನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನನಗೆ ನೀಡಿದರು. ಆದರೆ ಕೆಲವು ತಿಳಿಗೇಡಿಗಳು ಆರೇಳು ವರ್ಷ ಪ್ರಾಯದ ಮಕ್ಕಳು ಉಪವಾಸ ಅನುಷ್ಠಿಸುವಂತೆ ಮಾಡುತ್ತಾರೆ. ಅದರಿಂದ ಪುಣ್ಯ ಲಭಿಸುವುದೆಂದು ಅವರು ಭಾವಿಸುತ್ತಾರೆ. ಇದು ಪುಣ್ಯದ ಕೆಲಸವಲ್ಲ. ಇದು ದೌರ್ಜನ್ಯವಾಗಿದೆ. ಏಕೆಂದರೆ ಅದು ಮಕ್ಕಳು ಬೆಳವಣಿಗೆ ಹೊಂದುವ ಕಾಲವಾಗಿದೆ. ಆದರೆ ಮಕ್ಕಳು ಪ್ರಾಪ್ತ ವಯಸ್ಕರಾಗುವುದಕ್ಕೆ ಸಮೀಪವಾಗುವಾಗ ಅವರಿಗೆ ಉಪವಾಸದ ಅಭ್ಯಾಸ ಮಾಡಿಸಬೇಕು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅನುಮತಿ ಮತ್ತು ನಡೆವಳಿಕೆಯನ್ನು ನೋಡುವುದಾದರೆ ಹನ್ನೆರಡು ಹದಿಮೂರು ವರ್ಷ ಪ್ರಾಯದಲ್ಲಿ ಮಕ್ಕಳಿಗೆ ಸ್ವಲ್ಪ ಸ್ವಲ್ಪವಾಗಿ ಉಪವಾಸ ಮಾಡುವ ಅಭ್ಯಾಸ ಮಾಡಿಸಬೇಕು. ಪ್ರತಿವರ್ಷ ಕೆಲವು ಉಪವಾಸಗಳನ್ನು ಅನುಷ್ಠಿಸುವಂತೆ ಮಾಡಬೇಕು. ಅವರು ಹದಿನೆಂಟು ವರ್ಷದವರಾದಾಗ ಅದು ನನ್ನ ಅಭಿಪ್ರಾಯ ಪ್ರಕಾರ ಅವರು ಪ್ರಾಪ್ತ ವಯಸ್ಕರಾಗುವ ಕಾಲವಾಗಿದೆ. ಆಗ ಅವರು ಪೂರ್ಣವಾಗಿ ಉಪವಾಸ ಅನುಷ್ಠಿಸುವಂತೆ ಮಾಡಬೇಕು. ಪ್ರಥಮ ವರ್ಷ ಒಂದು ಉಪವಾಸ ಮಾತ್ರ ಅನುಷ್ಠಿಸಲು ನನಗೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನುಮತಿ ನೀಡಿದ್ದರು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಉಪವಾಸ ಅನುಷ್ಠಿಸಲು ಅನುಮತಿ ನೀಡಿದಾಗ ಹನ್ನೆರಡು ವರ್ಷ ಪ್ರಾಯದವನು ಒಂದು ಉಪವಾಸ ಅನುಷ್ಠಿಸಲು ಅನುಮತಿ ನೀಡಿದರು. ಈ ಪ್ರಾಯದಲ್ಲಿ ಮಕ್ಕಳು ಉತ್ಸಾಹಭರಿತರಾಗಿ ಹೆಚ್ಚು ಉಪವಾಸ ಮಾಡಲು ಬಯಸುತ್ತಾರೆ. ತಂದೆ ತಾಯಂದಿರು ಅವರನ್ನು ತಡೆಯಬೇಕಾಗಿದೆ. ಅನಂತರ ಮಕ್ಕಳ ಪ್ರಾಯ ವರ್ಧಿಸುವಾಗ ಅವರು ಹೆಚ್ಚು ಉಪವಾಸ ಅನುಷ್ಠಿಸಲು ತಂದೆ ತಾಯಂದಿರು ಪ್ರೋತ್ಸಾಹಿಸಬೇಕು. ಚಿಕ್ಕ ಪ್ರಾಯದಲ್ಲಿ ಮಕ್ಕಳು ಉಪವಾಸ ಅನುಷ್ಠಿಸದಂತೆ ನೋಡಿಕೊಳ್ಳಬೇಕಾದುದು ತಂದೆ ತಾಯಂದಿರ ಮೇಲೆ ಕಡ್ಡಾಯವಾಗಿದೆ. ಮಕ್ಕಳ ಪ್ರಾಯ ವರ್ಧಿಸುವಾಗ ಅವರು ಉಪವಾಸ ಅನುಷ್ಠಿಸಲು ಧೈರ್ಯ ನೀಡಬೇಕು. ಮಕ್ಕಳು ಎಲ್ಲ ಉಪವಾಸ ಏಕೆ ಅನುಷ್ಠಿಸುವುದಿಲ್ಲ ಎಂದು ಇತರರು ಆಕ್ಷೇಪಿಸಬಾರದು. ಏಕೆಂದರೆ ಚಿಕ್ಕ ಪ್ರಾಯದಲ್ಲಿ ಮಕ್ಕಳು ಎಲ್ಲ ಉಪವಾಸ ಅನುಷ್ಠಿಸಿದರೆ ಮುಂದೆ ಅವರಿಗೆ ಎಲ್ಲ ಉಪವಾಸ ಅನುಷ್ಠಿಸಲು ಸಾಧ್ಯವಾಗಲಾರದು.

ಅದೇ ರೀತಿ ಕೆಲವು ಮಕ್ಕಳು ಶಾರೀರಿಕವಾಗಿ ಬಲಹೀನರಾಗಿರುತ್ತಾರೆ. ನಾನು ನೋಡಿದ್ದೇನೆ. ಕೆಲವರು ನನ್ನನ್ನು ಭೇಟಿಯಾಗಲು ಬಂದಾಗ ಅವರ ಮಕ್ಕಳ ಪ್ರಾಯ ಹದಿನೈದು ಎಂದು ಹೇಳುವಾಗ ಆ ಮಕ್ಕಳು ಏಳೆಂಟು ಪ್ರಾಯದವರ ಹಾಗೆ ಕಾಣಿಸುತ್ತಾರೆ. ಇಂತಹ ಮಕ್ಕಳು ಉಪವಾಸ ಅನುಷ್ಠಿಸಬೇಕಾದ ಪ್ರಾಯ ಇಪ್ಪತ್ತೊಂದು ಎಂದು ನನಗೆ ತೋರುತ್ತದೆ. ಇದಕ್ಕೆದುರಾಗಿ ಕೆಲವು ಮಕ್ಕಳು ಹದಿನೈದು ವರ್ಷ ಪ್ರಾಯದವರಾಗಿದ್ದರೂ ಹದಿನೆಂಟು ವರ್ಷದವರ ಹಾಗೆ ಬಲಿಷ್ಠರಾಗಿರುತ್ತಾರೆ. ಅಂತಹ ಮಕ್ಕಳು ಉಪವಾಸ ಅನುಷ್ಠಿಸಬೇಕಾದ ವಯಸ್ಸು ಹದಿನೆಂಟು ಎಂದು ನನ್ನ ಮಾತಿನ ಪ್ರಕಾರ ವಾದಿಸುವುದಾದರೆ ಅಂತಹ ಮಕ್ಕಳು ನನ್ನ ಮೇಲಾಗಲಿ ಅಲ್ಲಾಹನ ವಿರುದ್ಧವಾಗಲಿ ದೌರ್ಜನ್ಯ ಮಾಡುವವರಾಗದೆ ತಮ್ಮ ಮೇಲೆಯೇ ದೌರ್ಜನ್ಯ ಮಾಡುವವರಾಗಿರುತ್ತಾರೆ. ಅದೇ ರೀತಿ ಚಿಕ್ಕ ಪ್ರಾಯದ ಮಕ್ಕಳು ಪೂರ್ಣವಾಗಿ ಉಪವಾಸ ಅನುಷ್ಠಿಸದೆ ಇದ್ದಾಗ ಯಾರಾದರೂ

ಆಕ್ಷೇಪಿಸುವುದಾದರೆ ಅವರು ಸಹ ತಮ್ಮ ಜೀವಗಳ ಮೇಲೆಯೇ ದೌರ್ಜನ್ಯ ಮಾಡುವವರಾಗುತ್ತಾರೆ.

ತರಾವೀಹ್ ಬಗ್ಗೆ ಗೋಲೀಕಿಯ ಅಕ್‌ಮಲ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಕೇಳಿದರು: ರಮಝಾನ್ ತಿಂಗಳಲ್ಲಿ ರಾತ್ರಿ ಎದ್ದು ನಮಾಝ್ ಮಾಡಲು ಆಜ್ಞಾಪಿಸಲಾಗಿದೆ. ಕಾರ್ಮಿಕರು ಮತ್ತು ಕೃಷಿಕರು ಹೀಗೆ ಮಾಡಲು ನಿರ್ಲಕ್ಷ್ಯತೆ ಹೊಂದಿರುತ್ತಾರೆ. ರಾತ್ರಿಯ ಕೊನೆಯ ಭಾಗದಲ್ಲಿ ಅನುಷ್ಠಿಸಬೇಕಾದ ಈ ಹನ್ನೊಂದು ರಕಅತನ್ನು ರಾತ್ರಿಯ ಮೊದಲ ಭಾಗದಲ್ಲಿ ಅನುಷ್ಠಿಸುವಂತೆ ಮಾಡಿದರೆ ಸರಿಯಾಗುವುದೇ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು ಹಾಗೆ ಮಾಡಬಹುದು ಎಂದು.

ತರಾವೀಹ್ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕೇಳಲಾಯಿತು. ತರಾವೀಹ್ ತಹಜ್ಜುದ್ ನಮಾಝ್ ಆಗಿದೆ ಎಂದಿರುವಾಗ ಇಪ್ಪತ್ತು ರಕಅತ್ ನಮಾಝ್ ಬಗ್ಗೆ ನಿಮ್ಮ ನಿರ್ದೇಶವೇನು. ತಹಜ್ಜುದ್ ನಮಾಝ್ ವಿತ್‌ರ್ ಸೇರಿ ಹನ್ನೊಂದು ರಕಅತ್ ಅಲ್ಲವೇ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಿರ ನಡೆವಳಿಕೆ ಎಂಟು ರಕಅತ್ ತಹಜ್ಜುದ್ ಆಗಿದೆ. ಇದನ್ನು ಪೈಗಂಬರರು ತಹಜ್ಜುದ್ ವೇಳೆಯಲ್ಲಿ ನಿರ್ವಹಿಸುತ್ತಿದ್ದರು. ಈ ಕ್ರಮವೇ ಉತ್ತಮವಾಗಿದೆ. ಆದರೆ, ಈ ನಮಾಝ್ ರಾತ್ರಿಯ ಮೊದಲ ಭಾಗದಲ್ಲೂ ಅನುಷ್ಠಿಸಬಹುದು. ಯೋಗ್ಯವಾದುದು ತಹಜ್ಜುದ್ ಕಾಲದಲ್ಲಿ ನಮಾಝ್ ಅನುಷ್ಠಿಸುವುದಾಗಿದೆ. ರಾತ್ರಿಯ ಮೊದಲ ಭಾಗದಲ್ಲಿ ಅನುಷ್ಠಿಸುವುದು ಸಹ ಅನುವದನೀಯವಾಗಿದೆ. ಒಂದು ಹದೀಸು ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಾತ್ರಿಯ ಮೊದಲ ಭಾಗದಲ್ಲಿಯೂ ಈ ನಮಾಝ್ ಅನುಷ್ಠಿಸಿದ್ದರು. ಆದರೆ ಇಪ್ಪತ್ತು ರಕಅತ್ ನಮಾಝ್ ಅನುಷ್ಠಾನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಜಾರಿಗೊಂಡದ್ದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ ನಾನು ಮೊದಲು ಪ್ರಸ್ತಾಪಿಸಿದಂತೆಯೇ ಆಗಿದೆ. ಇಪ್ಪತ್ತು ರಕಅತ್ ಮತ್ತು ಹೆಚ್ಚು ರಕಅತ್‌ಗಳು ಅನುಷ್ಠಿಸಲ್ಪಟ್ಟದ್ದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ ಪ್ರಕಾರ ಎಂಟು ರಕಅತ್ ತಹಜ್ಜುದ್ ಆಗಿದೆ.

ನಾನು ರಮಝಾನಿಗೆ ಸಂಬಂಧಿಸಿ ಕೆಲವು ವಿಷಯಗಳನ್ನು ನಿಮ್ಮ ಮುಂದಿರಿಸಿದ್ದೇನೆ. ನಾವು ತಖ್ವದಲ್ಲಿ ಸ್ಥಿರವಾಗಿದ್ದುಕೊಂಡು ಅಲ್ಲಾಹನ ಸಂಪ್ರೀತಿಗೆ ಆದ್ಯತೆ ನೀಡಿ ರಮಝಾನ್ ತಿಂಗಳ ಉಪವಾಸಗಳಿಂದ ಅನುಗ್ರಹ ಗಳಿಸುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

———————————*****———————————

***Friday Sermon delivered by Hadrath Khaleefatul Masih Al Khamis***(atba)

*at Masjid Baithul Futhuh, London on 03-06-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon